ಇಂದು ದಿನಾಂಕ 12-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಡಿ.ಹೆಚ್ಆರ್. ಪರವಾಗಿಃ ಶ್ರೀ ಪಿ.ಜಿ.ಹೆಚ್. ವಕೀಲರಿಂದಃ**

ಹೊಸಬಯ್ಯು ನಾಗಪ್ಪ ನಾಯ್ಕು ನನ್ನ ತಂದೆಯ ತಂದೆ ಎಂದರೆ ಸರಿ. ಹೊಸಬಯ್ಯು ನಾಯ್ಕು ಇವರು ಸ.ನಂ. 126 ರ ಪೈಕಿ 0-4-12 ಸ್ಥಳಕ್ಕೆ ಅರ್ಜಿಯನ್ನು ತುಂಬಿದ್ದರು. ನಿ.ಪಿ. 5 ರಲ್ಲಿರುವ ತೀರ್ಮಾನದ ಪ್ರಕಾರ ಸ.ನಂ. 126 ರಲ್ಲಿ ಹೊಸಬಯ್ಯು ನಾಗಪ್ಪ ನಾಯ್ಕು ಮೃತವಾರಿಸುದಾರ ಶ್ರೀಧರ ಹೊಸಬಯ್ಯು ನಾಯ್ಕು ಇವರಿಗೆ ಸಾಮಾಹಿಕ ಅಂತಾ ತೀರ್ಮಾನ ಆಗಿದೆ ಎಂದರೆ ಸರಿ. ನಿ.ಪಿ.11 ರ ಪುಟ ನಂ. 4 ರಲ್ಲಿ ನನ್ನ ತಂದೆಯ ಸಹೋದರಿಯರು ನನ್ನ ತಂದೆಗೆ ಹಕ್ಕುಬಿಟ್ಟು ಕೊಟ್ಟ ಬಗ್ಗೆ ನಮೂದು ಇದೆ. ಅವರು ಹಕ್ಕು ಬಿಡುಗಡೆ ದಸ್ತಾವೇಜನ್ನು ನೋಂದಣಿ ಕಚೇರಿಯಲ್ಲಿ ನೋಂದಾಯಿಸಿದ್ದರೆ . ನೋಂದಾಯಿತ ಹಕ್ಕು ಬಿಡುಗಡೆಯಲ್ಲಿ ನಿ.ಪಿ.11ರಲ್ಲಿ ಕಂಡುಬರುವಂತೆ 0-7-02 ಸ್ಥಳವನ್ನೇ ನಮೂದಿಸಿ ಹಕ್ಕು ಬಿಡುಗಡೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿ. ಹಕ್ಕು ಬಿಡುಗಡೆ ದಸ್ತಾವೇಜನ್ನು ನೋಂದಾಯಿಸುವ ಪೂರ್ವದಲ್ಲಿ ಶ್ರೀಧರ ಹೊಸಬಯ್ಯು ನಾಯ್ಕು ಇವರಿಗೆ 0-7-02 ಹಕ್ಕಿಲ್ಲ, ಕೇವಲ 0-4-12 ಸ್ಥಳಕ್ಕೆ ಮಾತ್ರ ಹಕ್ಕು ಇತ್ತು ಎಂಬುದು ನಮ್ಮ ಗಮನಕ್ಕೆ ಇತ್ತು ಎಂದರೆ ಸರಿಯಲ್ಲ. ಈ ಪ್ರಕರಣದ ಅರ್ಜಿದಾರರು ಲಕ್ಷ್ಮೀ ಶಿವಪ್ಪ ನಾಯ್ಕು ಹಾಗೂ ಇತರರು ಇದೇ ನ್ಯಾಯಾಲಯದಲ್ಲಿ ಮೂ.ದಾ. 8/ 2020 ದಾಖಲಿಸಿದ್ದರು ಎಂದರೆ ಗೊತ್ತಿಲ್ಲ. ಆ ದಾವೆಯಲ್ಲಿ ಕುಮಟಾ ಹಾಗೂ ಹಳಕಾರ ಗ್ರಾಮದ ಎರಡೂ ಆಸ್ತಿಗಳು ಸೇರಿದ್ದವು ಎಂದರೆ ಅದು ನಮಗೆ ಸಂಬಂಧ ಇಲ್ಲ. ಮೂ.ದಾ. ನಂ. 8/2020 ರ ದಾವೆಯಲ್ಲಿ ಮೊದಲು 2021 ರಲ್ಲೇ ತೀರ್ಮಾನ ಆಗಿತ್ತು ಎಂದರೆ ಗೊತ್ತಿಲ್ಲ. ಆ ತೀರ್ಮಾನದ ವಿರುದ್ಧ ಎದುರುದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಪೀಲನ್ನು ಸಲ್ಲಿಸಿದ್ದು ಅದು ಪುನಃ ಇದೇ ನ್ಯಾಯಾಲಯಕ್ಕೆ ವಿಚಾರಣೆಗೆ ಮರಳಿ ಕಳುಹಿಸಿದ್ದರು ಎಂದರೆ ಗೊತ್ತಿಲ್ಲ. ಪುನಃ ಆ ದಾವೆ ಜುಲೈ 2026 ರಲ್ಲಿ ನಿಖಾಲೆಯಾಗಿದೆ ಎಂದರೆ ಗೊತ್ತಿಲ್ಲ. ಮೂ.ದಾ. ನಂ. 8/2020 ನನ್ನ

ತಂದೆಯನ್ನೂ ಕೂಡ ಪಕ್ಷಗಾರರನ್ನಾಗಿ ಸೇರಿಸಬೇಕು ಎಂದು ಅರ್ಜಿಯನ್ನು ಹಾಕಲಾಗಿತ್ತು ಎಂದರೆ ಸರಿ . ಆ ಅರ್ಜಿಯನ್ನು ಆಧರಿಸಿ ಮೂ.ದಾ. ನಂ. 8/2020 ರಲ್ಲಿ ಈ ಮೊದಲು ಆದ ತೀರ್ಪನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಮೇಲ್ಮನವಿ ಸಲ್ಲಿಸಿಲ್ಲ ಎಂದು ನುಡಿದಿರುತ್ತಾರೆ.

ಶ್ರೀಧರ ಹೊಸಬಯ್ಯು ನಾಯ್ಕು ಇವರ ಕಬಜಾದಲ್ಲಿ 0-4-12 ಇದೆ. ಸಾಕ್ಷಿ ಸ್ವತಃ ಮನೆ ಮತ್ತು ತೋಟ ಇದೆ ಎಂದು ನುಡಿದಿರುತ್ತಾರೆ. ಪಹಣಿಪತ್ರಿಕೆಯಲ್ಲಿ ತಪ್ಪಾಗಿದೆ ಎಂದು ಸಹಾಯಕ ಕಮೀಶನರ್ ಕೋರ್ಟನಲ್ಲಿ ಅಪೀಲ್ ದಾಖಲಿಸಲು ತೊಂದರೆ ಇರಲಿಲ್ಲ. ಸ.ನಂ. 126 ರಲ್ಲಿ 0-7-02 ಲಕ್ಷ್ಮೀ ಶಿವಪ್ಪ ನಾಯ್ಕು ಇವರ ಕಬಜಾದಲ್ಲಿದೆ ಎಂದರೆ ಸರಿಯಲ್ಲ . ಆ ರೀತಿ ಸದರಿ ಸ್ಥಳ ಅವರ ಕಬಜಾದಲ್ಲಿದ್ದರೂ ಕೂಡ ಅವರ ಕಬಜಾದಲ್ಲಿ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮೂ.ದಾ. ನಂ. 8/2020 ರಲ್ಲಿ ಆದ ತೀರ್ಮಾನವನ್ನು ಪ್ರಶ್ನಿಸಬೇಕಿತ್ತೇ ವಿನಃ ಈ ಅರ್ಜಿಯನ್ನು ದಾಖಲಿಸಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಸಾಕ್ಷಿ ನಮಗೆ ಅನ್ಯಾಯವಾಗಿದೆ ಎಂದು ನುಡಿದಿರುತ್ತಾರೆ. ನಿ.ಪಿ. 10 ರಲ್ಲಿ ಶ್ರೀಧರ ಹೊಸಬಯ್ಯು ನಾಯ್ಕು ಇವರ ಪ್ರತ್ಯೇಕವಾಗಿ ಹಾಗೂ ಶಿವಪ್ಪ ರಾಮಾ ಸಣ್ಣತಮ್ಮ ತಂದೆ ಶಿವಪ್ಪ ನಾಯ್ಕು ಪ್ರತ್ಯೇಕವಾಗಿ ತೋರಿಸುತ್ತಿದೆ ಎಂದರೆ ಸರಿ . ನಿ.ಪಿ.10 ರ ಕೊನೆಯ ಪುಟದಲ್ಲಿ ಶ್ರೀಧರ ಹೊಸಬಯ್ಯು ನಾಯ್ಕು 0-7-02 ಪ್ರತ್ಯೇಕವಾಗಿಯೇ ತೋರಿಸಲಾಗಿದೆ ಎಂದರೆ ಸರಿ. ಅರ್ಜಿದಾರರು ದಾಖಲಿಸಿದ ದರಕಾಸ್ತು ಅರ್ಜಿಯಲ್ಲಿ ಈ ರೀತಿಯ ಕ್ಲೇಮ್ ಪಿಟಿಶನ್ ಸಲ್ಲಿಸಲು ನಮಗೆ ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ . ಬುದ್ಧಾಪೂರ್ವಕವಾಗಿ ಅರ್ಜಿದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ . ಅವರಿಗೆ ಇರುವುದೇ 0-4-12, ಅವರಿಗೆ ಹಕ್ಕಿರುವುದೂ 0-4-12, ಆದರೆ ಆರ್.ಟಿ.ಸಿ.ಯಲ್ಲಿ

0-7-02 ಆಗಿದೆ. ಶ್ರೀಧರ ಹೊಸಬಯ್ಯ ನಾಯ್ಕ ಇವರ ಹೆಸರಿಗೆ 0-7-2 ಆಗಿರುವುದೂ ಕೂಡ ತಪ್ಪಾಗಿರುತ್ತದೆ. ಅದೂ ಕೂಡ 0-4-12 ಆಗಬೇಕಿತ್ತು.

ನಿ.ಪಿ.5 ರಲ್ಲಿ ಸ.ನಂ. 126 ಕ್ಷೇತ್ರ 0-19-0 ಖರಾಬ 0-1-0 ಸಾಮಾಹಿಕ ಎಂದು ದಾಖಲಾಗಿದೆ, ಆದರೆ ನಮಗಾಗಲೀ, ಅರ್ಜಿದಾರರಿಗಾಗಲೀ 0-4-12 ಎಂದು ಪ್ರತ್ಯೇಕವಾಗಿ ದಾಖಲಾಗಿಲ್ಲ ಎಂದರೆ ಸಾಕ್ಷಿ ಅರ್ಜಿದಾರರಿಗೆ ಆಗಿದೆ ಎಂದು ನುಡಿದಿರುತ್ತಾರೆ. ನಮ್ಮ ಅರ್ಜಿ ವಿಚಾರಣೆ ಶಿವ್ಯಾ ತೆಗೆದುಹಾಕಲು ಯೋಗ್ಯವಾಗಿದೆ ಎಂದರೆ ಸರಿಯಲ್ಲ . ಪಹಣಿಪತ್ರಿಕೆಯಲ್ಲೇ ತಪ್ಪಾಗಿದ್ದರೆ ಸಹಾಯಕ ಕಮೀಶನರ್ ಕಚೇರಿಯಲ್ಲಿ ಹಾಗೂ ಮೂ.ದಾ. ನಂ. 8/2020 ರಲ್ಲಿ ಆದ ತೀರ್ಮಾನದ ವಿರುದ್ಧ ಕ್ರಮ ಕೈಗೊಳ್ಳಬೇಕಿತ್ತು ಎಂದರೆ ಸಾಕ್ಷಿ ಮೂ.ದಾ. ನಂ. 8/2020 ರಲ್ಲಿ ಸ.ನಂ. 126 ಇಲ್ಲ, ಈ ಅಮಲ್ಜಾರಿ ಪ್ರಕರಣದಲ್ಲಿ ಸ.ನಂ. 126 ಇದೆ ಎಂದು ನುಡಿದಿರುತ್ತಾರೆ. ಈ ಪ್ರಸ್ತುತ ಅಮಲ್ಜಾರಿ ಪ್ರಕರಣ ಮೂ.ದಾ. ನಂ. 8/2020 ರಲ್ಲಿ ಮೊದಲು ಆದ ತೀರ್ಮಾನದಂತೆ ದಾಖಲಿಸಿರುವ ಅರ್ಜಿ ಎಂದರೆ ಸಾಕ್ಷಿ ನಮ್ಮನ್ನೂ ಅದರಲ್ಲಿ ಸೇರಿಸಬೇಕಿತ್ತು, ಸ.ನಂ. 126 ರಲ್ಲಿ ನಮಗೂ ಹಕ್ಕಿದೆ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾದಂ.
ಕುಮಟಾ